ಹೊತ್ತಾದರೂ ಮಾಮ ತಿರುಗಿ ಸಾ ನೋಡಲಿಲ್ಲ. ಎಂದೂ ಅವರಿಂದ ಬೈಸಿಕೊಳ್ಳದ ಪಾಪದ ಜನ್ನು ಅಲ್ಲಿಂದ ಮೆಲ್ಲ ಹೊರಗೆಹೋದ. ದೇವರ ಮನೆಯ ಪಕ್ಕದ ಅಟ್ಟದ ಏಣಿಯಿಂದ ಕೆಳಗಿಳಿಯುತ್ತಿದ್ದ ಕಮಲತ್ತೆ 'ಜನ್ನೂ, ಯಾವಾಗ ಬಂದ್ಯೋ, ಅಮ್ಮ ಏನು ಮಾಡ್ತಾ ಇದ್ದಾಳೆ? ಎಂಥ ತಿಂಡಿ ತಿಂದ್ಯೋ?' ಎಂದು ಕೇಳಿದರೂ ಜನ್ನು ಅವರ ಕಡೆ ನೋಡದೆ ಸೀದಾ ಹೊರಧಾವಿಸಿದ. ಕಮಲತ್ತೆ ಅವನ ಹಿಂದೆ ಓಡಿ ಬಂದರೂ ಅವನು ಹಿಂಬಾಗಿಲಿನಿಂದ ಕೊಟ್ಟಿಗೆ ಪಕ್ಕದಿಂದ ಅವನ ಮನೆ ಕಡೆ ದಾರಿಯ ಕಡೆ ಓಡಿಯಾಗಿತ್ತು.

ಇಂದು ಎಲ್ಲಾ ಕಡೆ ಅವಮಾನ ಜನ್ನುವಿಗೆ. ಎಲ್ಲರ ಮೇಲೆ ಪ್ರಚಂಡ ಕೋಪ. ಕಣ್ಣತುಂಬಾ ನೀರು ತುಂಬಿಕೊಂಡು ಬಾಳೆಯ ತೋಟದ ನಡುವಿಂದ ನುಸುಳಿ ಹೊರಬಂದ. ಅಲ್ಲೊಂದು ಕುಡಿಯುವ ನೀರಿನ ಹೊಂಡ, ಅಮ್ಮ ಅಲ್ಲಿಂದ ಯಾವಾಗಲೂ ನೀರು ಕೊಂಡು ಹೋಗ್ತಾಳೆ. ಹತ್ತಿರ ಹೋದರೆ ಯಾರೋ ಚಿಕ್ಕ ಮಗು ಕೂತದ್ದು ಕಂಡಿತು. ಇನ್ನೂ ಮುಂದೆ ಹೋಗಿ ನೋಡುತ್ತಾನೆ. ತಿಮ್ಮು ತಂಗಿ ಅಪ್ಪಿ ಆ ಹೊಂಡದ ಬದಿಯಲ್ಲೇ ಕುಳಿತು ಉಚ್ಚೆ ಮಾಡುತ್ತಿದ್ದಾಳೆ! ಅದೂ ಆ ತಿಳಿ ನೀರಿನ ಹೊಂಡಕ್ಕೆ ಹೋಗಿ ಸೇರ್ತಾ ಇದೆ. ಮೊದಲೇ ಭಯಂಕರ ಕೋಪದಲ್ಲಿದ್ದ ಜನ್ನು 'ಎಂಥದೇ ಅಪ್ಪಿ ನೀನು, ಅಮ್ಮನ ನೀರಿನ ಹೊಂಡಕ್ಕೆ ಉಚ್ಚೆ ಹೊಯ್ತಿಯಾ?' ಎಂದು ಬೊಬ್ಬೆ ಹಾಕಿ ಸುಮಾರು ಎರಡೂವರೆ ವರ್ಷದ ಅಪ್ಪಿಯನ್ನು ಆ ನೀರಿನ ಹೊಂಡಕ್ಕೆ ದೂಕಿಯೇ ಬಿಟ್ಟ! ಆ ಚಿಕ್ಕ ಬಾಲೆಯೋ ಏನಾಗುತ್ತಿದೆಯೆಂದು ಅರಿವಾಗುವ ಮೊದಲೇ ನೀರಲ್ಲಿ ಬಿದ್ದಾಗಿತ್ತು. ಎರಡು ಸಲ ಮೇಲೆ ಬಂದು ಕೆಳಗೆ ಹೋಗಿಯಾಗಿತ್ತು. ಜನ್ನುವಿಗೆ ಎಂಥ ಮಾಡಿದೆ ಅಂತ ಅರ್ಥವಾಗಿ ಹೆದರಿಕೆಯಾಗತೊಡಗಿತು. 'ಅಪ್ಪಿ ನೀರಿಗೆ ಬಿದ್ಲು' ಅಂತ ಜೋರಾಗಿ ಕಿರುಚತೊಡಗಿದ. ದೂರದ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜ, ದೂಜ ಇಬ್ಬರೂ ಓಡಿ ಬಂದರು. ಮಂಜ ನೀರಿಗೆ ಇಳಿದವನೇ ಅಪ್ಪಿಯನ್ನು ಎತ್ತಿಕೊಂಡು ಬಂದ. ಪಾಪದ ಮಗು ನೀರಲ್ಲಿ ಮುಳುಗಿ ಪೂರ್ತಿ ಒದ್ದೆಮುದ್ದೆಯಾಗಿ ಅರೆ ಜೀವವಾಗಿತ್ತು. ಮಂಜ ಅವಳ ಹೊಟ್ಟೆಯಲ್ಲಿ ತುಂಬಿದ ನೀರು ಕಕ್ಕಿಸತೊಡಗಿದ. ಸ್ವಲ್ಪ ದೂರದಲ್ಲಿ ನಿಂತಿದ್ದ ಜನ್ನುವಿನ ಕಾಲೆರಡೂ ನಡುಗುತ್ತಿದ್ದವು. ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಅವನ ಎದೆ ಬಡಿತ ಅವನಿಗೇ ಕೇಳುತ್ತಿತ್ತು. ಮಂಜ–ದೂಜ ಅಪ್ಪಿಯ ಶುಶ್ರೂಷೆ ಮಾಡಿ ಅವಳನ್ನಪ್ಪಿ ಸಂತೈಸಿ ಹಿಂತಿರುವಷ್ಟರಲ್ಲಿ ಜನ್ನು ಅವನಗರಿಯದೇ ಸ್ವರ ತೆಗೆದು ಬಿಕ್ಕಿ ಬಿಕ್ಕಿ ಕೂಗಿದ. ಅಮ್ಮನ ಮೇಲಿನ ಸಿಟ್ಟು, ತಿಮ್ಮುವಿನ ಮೇಲಿನ ಆಕ್ರೋಶ, ಕಿಟ್ಟು ಮಾಮನ ಮನೇಲಿ ಮಾಡಿದ್ದ ತಪ್ಪಿನ ಅಪರಾಧಿ ಭಾವಗಳೆಲ್ಲಾ ಆ ಕಣ್ಣೀರಿನಲ್ಲಿ ಹರಿದುಹೋದವು. ಪಾಪದ ಅಪ್ಪಿಗೋ ತನ್ನ ನೀರಿಗೆ ದೂಡಿದ್ದು ಜನ್ನು ಅಂತ ಗೊತ್ತೇ ಇರಲಿಲ್ಲ, ಗೊತ್ತಿದ್ದರೂ ಹೇಳುವಷ್ಟು ಬುದ್ಧಿ ಇರಲಿಲ್ಲ! ಅವಳನ್ನು ಸಮಾಧಾನಿಸುತ್ತಾ 'ಎಂಥಕ್ಕೆ ಕೂಗುವುದು, ನೀವಿಲ್ಲದೇ ಇರುತ್ತಿದ್ದರೆ ಇವತ್ತು ಅಪ್ಪಿಯ ಕಥೆ ಗೋವಿಂದ ಆಗ್ತಾ ಇತ್ತು, ಗೊತ್ತುಂಟಾ? ಇದರಮ್ಮನಿಗೂ ಯಾವಾಗ್ಲೂ ಕಾಯಿಲೆ, ಅಪ್ಪ ಎಲ್ಲೋ ಕೆಲಸದಲ್ಲಿರುತ್ತಾನೆ. ಪಾಪದ ಮಗು!' ಎಂದು ದೂಜ ಹೇಳುತ್ತಾ ಇದ್ದಂತೆ ಮಂಜ, 'ಹೆದರಿಕೆ ಆಗ್ತಾ ಉಂಟಾ? ಹಾಗೆಲ್ಲಾ ಕೂಗಬಾರದು, ಮನೆಗೆ ನಡೀರಿ' ಅಂದ. ಅವನಷ್ಟು ಹೇಳಿದ್ದೇ ತಡ, ಬಿಟ್ಟ ಬಾಣದಂತೆ ಜನ್ನು, ಮನೆ ಕಡೆ ಓಡಿದ.

ಮೂಗಿನ ಸಿಂಬಳ, ಕಣ್ಣ ನೀರು ಒರೆಸುವಷ್ಟೂ ವ್ಯವಧಾನವಿಲ್ಲದೇ ಮನೆಗೆ ಓಡಿ ಬಂದು ಸೀದಾ ಹೋದದ್ದು ದೇವರ ಕೋಣೆಗೆ. ಅವನ ಪುಣ್ಯಕ್ಕೆ ಅಲ್ಲಿ ಅಜ್ಜಿ–ಅತ್ತೆ ಇಬ್ಬರೂ ಇರಲಿಲ್ಲ. ಒಳ ಹೊಕ್ಕವನೇ ನೋಡಿದ್ದು ಹೂವಿನಹಾರ ತೊಟ್ಟು ನೀಲಾಂಜನದ ಬೆಳಕಿನಲ್ಲಿ ನಿಂತಿದ್ದ ಶ್ರೀರಾಮಚಂದ್ರ ದೇವರ ಪಟದೆಡೆಗೆ, 'ನಾ ಎಂಥಸಾ ಬೇಕಂತ ಮಾಡಿಲ್ಲ, ಮತ್ತೆ... ಮತ್ತೆ ಅವಳ್ಯಾಕೆ ಅಲ್ಲಿ ಉಚ್ಚೆ ಮಾಡಬೇಕಿತ್ತು? ಆದ್ರೆ ಸಾ ನಂದೇ ತಪ್ಪಾಯ್ತು ಅಂತ ಕೇಳ್ತೆ. ನಿಂಗೆ ಅಮ್ಮ ಕೊಡ್ತಾಳಲ್ಲಾ, ನೈವೇದ್ಯ, ಅದ್ರೊಟ್ಟಿಗೆ ಕೊಟ್ಟಿಗೆ ಹಿಂದಿನ ಗುಡ್ಡದ ಗೇರುಹಣ್ಣು ಕೊಡ್ತೆ ಆಯ್ತಾ. ಯಾರ ಹತ್ರ ಹೇಳಬಾರದು, ಗೊತ್ತಾಯ್ತಾ?' ಅಂತ ಕಟ್ಟಾಜ್ಞೆ ಮಾಡಿದ.

ಅಡುಗೆಮನೆಯಿಂದ ಸಂಡಿಗೆ ಕರಿದ ಸುವಾಸನೆ ತೇಲಿ ಬಂತು, ಒಳಗೆ ಅಮ್ಮ ಮೆಲುದನಿಯಲ್ಲಿ ಹಾಡು ಹೇಳಿಕೊಳ್ಳುತ್ತಿದ್ದದ್ದು ಕೇಳಿಬಂತು. ಕಣ್ಣು–ಮೂಗು ಪುಟ್ಟ ಕೈಲೇ ಒರೆಸಿಕೊಳ್ಳುತ್ತಾ ಅಮ್ಮನೆಡೆಗೆ ಧಾವಿಸಿದ. ಪಟದಲ್ಲಿದ್ದ ಶ್ರೀರಾಮಚಂದ್ರ ನಕ್ಕುಬಿಟ್ಟ.

●